11.50 ಎ.ಎಂ

ಅವರನ್ನು ಇಲ್ಲಿಯವರೆಗೆ ಬೇರೆ ಕಡೆ ವರ್ಗ ಮಾಡಿಲ್ಲ, ಅಲ್ಲಿ ಆರ್.ಟಿ.ಓ. ಸಹಿತ ಎಲ್ಲಾ ಅಧಿಕಾರಿಗಳು ಶಾಮೀಲಾಗಿ ಎಲ್ಲರಿಗೂ ಸಮ ಪಾಲು ಇದೆ. ಎಲ್ಲರೂ ಭ್ರಷ್ಟಾಚಾರಗಳಾಗಿದ್ದಾರೆ. ಅಲ್ಲಿರತಕ್ಕಂತಹ ಆಟೋ ಚಾಲಕರಿಗೆ ಮತ್ತು ವಾಹನ ಚಾಲಕರಿಗೆ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗಿದೆ. ಅದನ್ನು ದಯವಿಟ್ಟು ಅಲ್ಲಿರತಕ್ಕಂತಹ ಆರ್.ಟಿ.ಓ ಬಗ್ಗೆ, ಅಲ್ಲಿರತಕ್ಕಂತಹ ಸಿಬ್ಬಂದಿ ವರ್ಗದ ಬಗ್ಗೆ ತಕ್ಷಣ ಕ್ರಮತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ದ.ಕ. ಹಾಗೂ ಕೊಡಗು ಜಿಲ್ಲೆಗಳಲ್ಲಿನ ಗ್ರಾಮೀಣ ಒಕ್ಕಲಿಗ ಜನಾಂಗದವರಿಗೆ ಹಿಂದುಳಿದ ವರ್ಗವೆಂದು ದೃಢೀಕರಿಸುವುದು

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಕೊಡಗು ಜಿಲ್ಲೆಯಲ್ಲಿ ಸುಮಾರು ಶೇಕಡ 25 ಗೌಡ ಜನಾಂಗದ ಜನ ಸಂಖ್ಯೆಯಿದ್ದು, ಅಲ್ಲಿನ ಜನಾಂಗದವರು ಬಹಳ ಹಿಂದುಳಿದವರು ಆಗಿದ್ದು ಹೆಚ್ಚಿನವರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವವರಾಗಿರುತ್ತಾರೆ. ಈ ಜನಾಂಗದವರು ಈಗಾಗಲೇ ರಾಜ್ಯ ಸರ್ಕಾರದ ನೀತಿಯ ಪ್ರಕಾರ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದು ಪ್ರವರ್ಗ 3 ಎ ವರ್ಗದವರೆಂದು ಪರಿಗಣಿಸಿ ಮೀಸಲಾಗಿ ದೃಢೀಕರಣಗಳನ್ನು ನೀಡಲಾಗುತ್ತಿದೆ. ಆದರೆ ಕೇಂದ್ರ ಸರ್ಕಾರವು 'ಮಂಡಲ್ ಆಯೋಗದ' ಶಿಫಾರಸ್ಸುಗಳನ್ನು ಅಂಗೀಕರಿಸಿ ಇತರ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಜಾರಿಗೆ ತರುವಾಗ ಗ್ರಾಮೀಣ ಒಕ್ಕಲಿಗರಿಗೆ ಮೀಸಲಾತಿಯನ್ನು ನಿಗದಿಪಡಿಸಿದೆ. ಈ ಮೀಸಲಾತಿಯು ಜಾರಿಗೆ ಬಂದ ಸಮಯದಲ್ಲಿ ಅಂದರೆ 1994ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕೊಡಗು ಜಿಲ್ಲೆಗಳಲ್ಲಿ ಒಕ್ಕಲಿಗ ಜನಾಂಗದವರಿಗೆ ಗ್ರಾಮೀಣ ಒಕ್ಕಲಿಗರು ಎಂದು ಪರಿಗಣಿಸಿ ಕೇಂದ್ರ ಸರ್ಕಾರದ ಮೀಸಲಾತಿ ದೃಢೀಕರಣವನ್ನು ನೀಡಲಾಗಿದೆ. ಆದರೆ 1994ರ ಅಂತ್ಯದಲ್ಲಿ ದಕ್ಷಿಣ ಕನ್ನಡದ ಒಕ್ಕಲಿಗ ಜನ ಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ಅಂದರೆ ಪುತ್ತೂರು, ಸುಳ್ಯ, ಬಂಟ್ವಾಳ, ಬೆಳ್ತಂಗಡಿ, ಕೊಡಗು ಜಿಲ್ಲೆಯ ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗದ ಮೀಸಲಾತಿ ಆಜ್ಞೆಯಾನುಸಾರ ಒಕ್ಕಲಿಗ ಜನಾಂಗದವರಿಗೆ ಗ್ರಾಮೀಣ ಒಕ್ಕಲಿಗರು ಎಂಬ ದೃಢೀಕರಣವನ್ನು ಸದರಿ ಜಿಲ್ಲೆಗಳ ಕಂದಾಯ ಅಧಿಕಾರಿಗಳ ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳ ವ್ಯಾಖ್ಯಾನದ ಮೇರೆಗೆ ನಿಲ್ಲಿಸಿರುತ್ತಾರೆ. ಅಧಿಕಾರಿಗಳ ಒಂದು ವ್ಯಾಖ್ಯಾನದಿಂದಾಗಿ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲ್ಲಿರುವ ಗ್ರಾಮೀಣ ಬಡ ಒಕ್ಕಲಿಗ ಕುಟುಂಬದ ಯುವಕ ಯುವತಿಯವರಿಗೆ ದೊಡ್ಡ ಅನ್ಯಾಯವಾದಂತಾಗಿದೆ. ಆದುದರಿಂದ ದಯಾಳುಗಳಾದ ತಾವು ಕೂಡಲೇ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ ಕಂದಾಯ ಅಧಿಕಾರಿಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದ ಒಕ್ಕಲಿಗ ಜನಾಂಗದವರಿಗೆ ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗದವರಿಗೆ ಸಂಬಂಧಿಸಿದಂತೆ ಗ್ರಾಮೀಣ ಒಕ್ಕಲಿಗ ಎಂಬ ದೃಢೀಕರಣವನ್ನು ನೀಡುವಂತೆ ಸೂಕ್ತ ನಿರ್ದೇಶನ ನೀಡಬೇಕೆಂದು ನಾವು ಕೋರುತ್ತೇವೆ.

ಇದರಿಂದ ಸದರಿ ಜಿಲ್ಲೆಯ ಗ್ರಾಮೀಣ ಒಕ್ಕಲಿಗ ಯುವಕ ಯುವತಿಯವರಿಗೆ ತಾವು ನ್ಯಾಯ ಒದಗಿಸಿದಂತಾಗುತ್ತದೆ. ಈ ದೃಷ್ಟಿಯಿಂದ ಜಿಲ್ಲಾಧಿಕಾರಿಗಳಿಗೆ ಆದೇಶ ಹೊರಡಿಸಿದ ದೃಢೀಕರಣ ಪತ್ರವನ್ನು ಸಮಾಜ ಕಲ್ಯಾಣ ಇಲಾಖೆಗೆ ಮತ್ತು ರೆವಿನ್ಯೂ ಇಲಾಖೆಗೆ ಕಳುಹಿಸಬೇಕೆಂದು ಕೋರುತ್ತೇನೆ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದಗೌಡರು ಹೇಳಿದ ಪ್ರಶ್ನೆಗೆ ಈಗಾಗಲೇ ಕೆಲವು ನಿಯಮಗಳನ್ನು ಮಾನ್ಯ ಮಾಡಿ ಆದೇಶ ಕೊಟ್ಟಿದ್ದೇವೆ. ದಕ್ಷಿಣ ಕನ್ನಡ ಕೊಡಗು ಜಿಲ್ಲೆಗೆ ಶೇಕಡ 35 ಗೌಡ ಜನಾಂಗದ ಜನಸಂಖ್ಯೆ ಇದ್ದು, ಅಲ್ಲಿನ ಜನಾಂಗ ಬಹಳ ಹಿಂದುಳಿದಿದೆ. ಈ ಜನಾಂಗದವರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರೆ. ರಾಜ್ಯ ಸರ್ಕಾರದ ಮೀಸಲಾತಿ ಆದೇಶದನ್ವಯ ಸಕ್ಕ 150 ಬಿಸಿಎ 94, ದಿ: 17.9.94ರಲ್ಲಿ ಒಕ್ಕಲಿಗ ಹಾಗೂ ಅದರ ಉಪ ಜಾತಿಗಳು ಪ್ರವರ್ಗ '3' ಎ ನಲ್ಲಿ ಸೇರಿಸಿದ್ದು, ಆದೇಶದನ್ವಯ ಆ ಜನಾಂಗದವರಿಗೆ ಮೀಸಲಾತಿ ದೃಢೀಕರಣ ಪತ್ರಗಳನ್ನು ನೀಡಲಾಗುತ್ತಿದೆ. ಪ್ರಸ್ತಾವನೆಯಲ್ಲಿ ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗಗಳ ಮೀಸಲಾತಿ ಅನುಸಾರ ಒಕ್ಕಲಿಗ ಜಾತಿ ಸೇರಿದ್ದು, ಈ ಆದೇಶದ ಸಂಬಂಧಪಟ್ಟ ಪ್ರಾಧಿಕಾರ ದೃಢೀಕರಣ ಪತ್ರವನ್ನು ನೀಡುತ್ತಿದೆ. ಸದರಿ ಜನಾಂಗದವರು ಈ ರೀತಿ ದೃಢೀಕರಣ ಪತ್ರವನ್ನು ಪಡೆಯಲು ಕೇಂದ್ರ ಸರ್ಕಾರದವರು ಆದೇಶವನ್ನು ಹೊರಡಿಸಬೇಕು, ಅಥವಾ ಮೀಸಲಾತಿ ಪಟ್ಟಿಯಲ್ಲಿ ಸದರಿ ಜಾತಿಯು ಸೇರಬೇಕು. ಈ ರೀತಿ ಜಾತಿಯನ್ನು ಸೇರಿಸಬೇಕಾದಲ್ಲಿ ಆ ಜಾತಿಯ ಸಂಘದವರು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿಯನ್ನು ಸಲ್ಲಿಸಬೇಕು.

ಮೇಲೂರು ಪಟ್ಟಣಕ್ಕೆ ಬಸ್ ನಿಲ್ದಾಣ ನಿರ್ಮಾಣ

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಅಧ್ಯಕ್ಷರೆ, ನಮ್ಮ ಮೇಲೂರು ಪಟ್ಟಣಕ್ಕೆ ಬಸ್ ನಿಲ್ದಾಣ ನಿರ್ಮಾಣ ಆಗಬೇಕೆಂದು ಒತ್ತಾಯ ಮಾಡಿದ ಮೇಲೆ ಸರ್ಕಾರ ಮಂಜೂರಾತಿ ನೀಡಿ ಟೆಂಡರ್ ಕರೆದು ಆಯಿತು, ಟೆಂಡರ್ ಕರೆದು ಸುಮಾರು ಮೂರು ತಿಂಗಳು ಆಗಿದೆ. ಇನ್ನೂ ಕೂಡ ಕಾಮಗಾರಿ ಆದೇಶ ಕೊಟ್ಟರು. ಅದು ವಿಶ್ವ ವಿಖ್ಯಾತ ಸ್ಥಳವಾಗಿದೆ. ಆದಷ್ಟು ಬೇಗ ಕಾಮಗಾರಿ ಆದೇಶವನ್ನು ನೀಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭೂರೀ ನೀರಾವರಿ ಸಚಿವರು) : ಕೆಎಸ್ಆರ್‌ಟಿಸಿ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಸರ್ಕಾರದಿಂದ ಆದೇಶ ಕಳುಹಿಸುತ್ತೇವೆ.

ಕರ್ನಾಟಕ ಪರಿಶಿಷ್ಟ ಜಾತಿ: ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಅವ್ಯವಹಾರ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, 22.8.98ಕ್ಕೆ ರಾಜ್ಯ ಸರ್ಕಾರ ಒಂದು ಆದೇಶ ಹೊರಡಿಸಿ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳು ಏನಾದರೂ ನೀರಾವರಿ ಕೊಳವೆ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಕೊಳ್ಳಬೇಕಾದರೆ ಸ್ಥಳೀಯ